ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1057
ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು	:	ಶ್ರೀ ಕವಟಗಿಮಠ ಮಹಾಂತೇಶ್ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	21.09.2021
ಉತ್ತರಿಸುವವರು	:	ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ವಿಕಲಚೇತನ ವಿಶೇಷ ಮಕ್ಕಳ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರುಗಳು ಸಾಮಾನ್ಯ ಶಾಲಾ ಶಿಕ್ಷಕರುಗಳಿಗಿಂತ ಕಡಿಮೆ ವೇತನ ಪಡೆಯುತ್ತಿದ್ದು ಹಾಗೂ ಇತರೆ ಸಾಮಾನ್ಯ ಸೌಲಭ್ಯಗಳಿಂದ ವಂಚಿತರಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;	• ರಾಜ್ಯದಲ್ಲಿನ ಸರ್ಕಾರಿ ವಿಶೇಷ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರುಗಳು ಸಾಮಾನ್ಯ ಶಾಲಾ ಶಿಕ್ಷಕರಂತೆಯೇ ವೇತನ ಹಾಗೂ ಇತರೆ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. • ಇಲಾಖೆಯಿಂದ ಅನುದಾನ ಸಂಹಿತೆ 1982ರಡಿಯಲ್ಲಿನ ವಿಶೇಷ ಮಕ್ಕಳ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರುಗಳು ಸಾಮಾನ್ಯ ಶಾಲಾ ಶಿಕ್ಷಕರಂತೆಯೇ ವೇತನ ಹಾಗೂ ಇತರೆ ಸಾಮಾನ್ಯ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. • ಸರ್ಕಾರದ ಆದೇಶದ ಸಂಖ್ಯೆ: ಮಮಇ 109 ಪಿಹೆಚ್‌ಪಿ 2010 ದಿನಾಂಕ:14.12.2010ರನ್ವಯ ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಿದೆ. ಸದರಿ ಯೋಜನೆಯಡಿ ಬರುವ ವಿಶೇಷ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರಿಗೆ ಹಾಗೂ ಇತರೆ ಸಿಬ್ಬಂದಿಗಳಿಗೆ ವೇತನವನ್ನು ಗೌರವಧನದ ರೂಪದಲ್ಲಿ ನೀಡಲಾಗುತ್ತಿದೆ. ಇವರಿಗೆ ಯಾವುದೇ ಇತರೆ ಸೌಲಭ್ಯಗಳನ್ನು ನೀಡಲು ಸದರಿ ಯೋಜನೆಯಡಿ ಅವಕಾಶವಿರುವುದಿಲ್ಲ. ಈ ಯೋಜನೆಯಡಿ ಶಿಕ್ಷಕರಿಗೆ ನೀಡುತ್ತಿರುವ ಗೌರವಧನವು ಸಾಮಾನ್ಯ ಶಾಲಾ ಶಿಕ್ಷಕರ ವೇತನಕ್ಕಿಂತ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ)	ಹಾಗಿದ್ದಲ್ಲಿ, ಈ ಶಿಕ್ಷಕರುಗಳಿಗೆ ಪ್ರತಿ ತಿಂಗಳು ವೇತನ ನೀಡುವ ಕುರಿತು ಭತ್ಯೆ, ನಿವೃತ್ತಿ ವೇತನ ಹಾಗೂ ಇನ್ನಿತರೆ ಸೌಲಭ್ಯಗಳ ತಾರತಮ್ಯ ನಿವಾರಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು;	1982ರ ರಾಜ್ಯ ಅನುದಾನ ಸಂಹಿತೆಯಡಿ 34 ವಿಶೇಷ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. ರಾಜ್ಯ ಅನುದಾನ ಸಂಹಿತೆಯಡಿ ಒಟ್ಟು 27 ಶಾಲೆಗಳ ಹುದ್ದೆಗಳು ನಿಯಮಾನುಸಾರ ರೋಸ್ಟರ್‌ಗಳನ್ನು ಪಾಲಿಸದೇ ನೇಮಕಾತಿ ಗೊಂಡಿರುವುದರಿಂದ ಆರ್ಥಿಕ ಇಲಾಖೆಯ ಸಹಮತಿ ದೊರೆತಿರುವುದಿಲ್ಲ. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹಾಗೂ ನಿವೃತ್ತಿ ಹೊಂದಿರುವ ಶಿಕ್ಷಕ / ಶಿಕ್ಷಕೇತರ ಹುದ್ದೆಗಳನ್ನು ಒಂದು ಬಾರಿಗೆ ಊರ್ಜಿತಗೊಳಿಸುವ ಬಗ್ಗೆ ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿದೆ. ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಹೊಸ ಯೋಜನೆಯಡಿ ವಿಶೇಷ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ / ಶಿಕ್ಷಕೇತರ ಸಿಬ್ಬಂದಿಗಳಿಗೆ ಗೌರವಧನವನ್ನು ಹೆಚ್ಚಿಸುವ ಬಗ್ಗೆ ಆರ್ಥಿಕ ಇಲಾಖೆಯ ಅಭಿಪ್ರಾಯ ಪಡೆಯಲಾಗಿ ಹೆಚ್ಚುವರಿ ಅನುದಾನವನ್ನು ಒದಗಿಸುವುದು ಕಷ್ಟಸಾಧ್ಯವೆಂದು ಅಭಿಪ್ರಾಯಿಸಿದೆ.
ಇ)	ಇವರುಗಳ ವೇತನಗಳನ್ನು HRMS ತಂತ್ರಾಂಶದಡಿ ತಂದು ನಿಗಧಿತ ಪ್ರತಿ ತಿಂಗಳು ಸಂಬಳ ನೀಡಲು ಇರುವ ತಾಂತ್ರಿಕ ಕಾರಣಗಳೇನು; ಇದನ್ನು ಸರಿಪಡಿಸುವ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳೇನು;	ರಾಜ್ಯದ 34 ಅನುದಾನಿತ ವಿಶೇಷ ಶಾಲೆಗಳ ಸಿಬ್ಬಂದಿಗಳಿಗೆ ಏಪ್ರಿಲ್ 2021ರಿಂದ Human Resource Management System (HRMS)ನಲ್ಲಿ ಸಿಬ್ಬಂದಿಗಳ ಮಾಹಿತಿಯನ್ನು ಅಳವಡಿಸಿದ್ದಲ್ಲಿ ಮಾತ್ರ ವೇತನ ಪಾವತಿಗೆ ಕ್ರಮವಹಿಸಲಾಗುವುದೆಂದು ಆರ್ಥಿಕ ಇಲಾಖೆಯು ತಿಳಿಸಿತ್ತು. HRMSನಲ್ಲಿ ಸಿಬ್ಬಂದಿಗಳ ವೇತನ ನೀಡಲು ಸಿಬ್ಬಂದಿಗಳ ಮಾಹಿತಿ ಮತ್ತು ಶಾಲೆಯ Grant in Aid (GIA) ಕೋಡ್‌ನ್ನು ನೀಡಿ ಅಪ್ ಲೋಡ್

<table>
<tr><td></td><td></td><td>ಮಾಡಿದರೆ ಮಾತ್ರ ವೇತನ ಪಾವತಿ ಮಾಡಬಹುದಾಗಿರುತ್ತದೆ. ಇಲ್ಲಿಯವರೆವಿಗೂ 34 ಶಾಲೆಗಳಲ್ಲಿ 07 ಶಾಲೆಗಳಿಗೆ ಮಾತ್ರ ಆರ್ಥಿಕ ಇಲಾಖೆಯು ಸಹಮತಿ ನೀಡಿರುವ ಹಿನ್ನೆಲೆಯಲ್ಲಿ, ಈ ಶಾಲೆಗಳಿಗೆ ಮಾತ್ರ ಹೆಚ್.ಆರ್.ಎಂ.ಎಸ್.ನಲ್ಲಿ ವೇತನ ಸೆಳೆಯಲಾಗುತ್ತಿದೆ. ಇನ್ನುಳಿದ 27 ಶಾಲೆಗಳಿಗೆ ಆರ್ಥಿಕ ಇಲಾಖೆಯಿಂದ Grant in Aid (GIA) ಕೋಡ್ ಇಲ್ಲಿಯವರೆವಿಗೂ ದೊರೆತಿರುವುದಿಲ್ಲ. ಈ ಹಿನ್ನಲೆಯಲ್ಲಿ ಸಿಬ್ಬಂದಿಗಳ ವೇತನ ಸಮಸ್ಯೆಯನ್ನು ಆರ್ಥಿಕ ಇಲಾಖೆಯ ಗಮನಕ್ಕೆ ತಂದಿದ್ದು, ಪ್ರಸ್ತುತ ಹೆಚ್.ಆರ್.ಎಂ.ಎಸ್.ನಲ್ಲಿ ವೇತನ ಸೆಳೆಯುವ ಬದಲಾಗಿ ಈ ಹಿಂದೆ ವೇತನ ನೀಡಲಾಗುತ್ತಿದ್ದ ಕೆ-2 ತಂತ್ರಾಂಶದಲ್ಲಿ ವೇತನ ಭರಿಸಲು ಆರ್ಥಿಕ ಇಲಾಖೆಯಿಂದ ದಿನಾಂಕ:19.08.2021ರಂದು ಅನುಮತಿ ಪಡೆಯಲಾಗಿರುತ್ತದೆ. ಪ್ರಸ್ತುತ ಎಲ್ಲಾ 27 ಶಾಲೆಗಳ ಶಿಕ್ಷಕ ಮತ್ತು ಶಿಕ್ಷಕೇತರರು ಆಗಸ್ಟ್ ಮಾಹೆಯಿಂದ ವೇತನ ಪಡೆಯುತ್ತಿದ್ದಾರೆ.</td></tr>
<tr><td>ಈ)</td><td>ರಾಜ್ಯದಲ್ಲಿರುವ ಒಟ್ಟು ಸರ್ಕಾರಿ ವಿಕಲಚೇತನರ ವಿಶೇಷ ಮಕ್ಕಳ ಶಾಲೆಗಳ ಸಂಖ್ಯೆ ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳ ಸಂಖ್ಯೆಯ ಮಾಹಿತಿ ಒದಗಿಸುವುದು.</td><td>ರಾಜ್ಯದಲ್ಲಿರುವ ಸರ್ಕಾರಿ ವಿಶೇಷ ಶಾಲೆಗಳ ಸಂಖ್ಯೆ ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳ ಸಂಖ್ಯೆಯ ಮಾಹಿತಿಯು ಈ ಕೆಳಕಂಡಂತಿದೆ.
<table>
<tr><th>ಕ್ರ.ಸಂ</th><th>ವಿವರ</th><th>ವಿಕಲಚೇತನರ ಶಾಲೆಗಳ ಸಂಖ್ಯೆ</th><th>ಕರ್ತವ್ಯ ನಿರ್ವಹಿಸುತ್ತಿರುವ ಬೋದಕ ಸಿಬ್ಬಂದಿ</th><th>ಕರ್ತವ್ಯ ನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿ</th></tr>
<tr><td>1.</td><td>ಸರ್ಕಾರಿ ವಿಶೇಷ ಶಾಲೆಗಳು (ಅಂಧ ಹಾಗೂ ಶ್ರವಣ ದೋಷವುಳ್ಳ ಮಕ್ಕಳ ಶಾಲೆ)</td><td>09</td><td>56</td><td>22</td></tr>
</table></td></tr>
<tr><td>ಉ)</td><td>ಬೆಳಗಾವಿ ಜಿಲ್ಲೆಯ ವಿಕಲಚೇತನ ವಿಶೇಷ ಮಕ್ಕಳ ಶಾಲಾ ಶಿಕ್ಷಕರಿಗೆ ಕಳೆದ ಆರು ತಿಂಗಳಿನಿಂದ ವೇತನ/ಭತ್ಯೆಗಳನ್ನು ನೀಡದಿರಲು ಕಾರಣಗಳೇನು; (ವಿವರ ನೀಡುವುದು)</td><td>ಮಾರ್ಚ್ 2021 ರಿಂದ ಹೆಚ್.ಆರ್.ಎಂ.ಎಸ್.ನಲ್ಲಿ 1982ರ ರಾಜ್ಯ ಅನುದಾನ ಸಂಹಿತೆಯಡಿ ನಡೆಯುತ್ತಿರುವ ವಿಶೇಷ ಶಾಲೆಗಳಲ್ಲಿನ ಸಿಬ್ಬಂದಿಗಳ ಮಾಹಿತಿಯನ್ನು ಅಳವಡಿಸಿದ್ದಲ್ಲಿ ಮಾತ್ರ ವೇತನ ಪಾವತಿಗೆ ಕ್ರಮವಹಿಸಲಾಗುವುದೆಂದು ಆರ್ಥಿಕ ಇಲಾಖೆಯವರು ಸೂಚಿಸಿದ್ದರಿಂದ ವೇತನ ಪಾವತಿಯಾಗಿರಲಿಲ್ಲ.
ಈ ಶಾಲೆಗಳಲ್ಲಿನ ಹುದ್ದೆಗಳಿಗೆ ಆರ್ಥಿಕ ಇಲಾಖೆಯ ಸಹಮತಿ ಇಲ್ಲದಿರುವುದರಿಂದ ಹೆಚ್.ಆರ್.ಎಂ.ಎಸ್ ಮುಖಾಂತರ ವೇತನ ಪಾವತಿಸಲು ಅವಕಾಶವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಆರ್ಥಿಕ ಇಲಾಖೆಗೆ ಪತ್ರ ವ್ಯವಹರಿಸಿದ ನಂತರ ಕೆ.2 ನಲ್ಲಿ ವೇತನ ನೀಡುವಂತೆ ಆರ್ಥಿಕ ಇಲಾಖೆಯವರು ಸಹಮತಿ ನೀಡಿದ್ದು, ವೇತನವನ್ನು ಪಾವತಿಸಲಾಗುತ್ತಿದೆ.</td></tr>
<tr><td>ಊ)</td><td>ಇವರ ಸಮಸ್ಯೆಗಳನ್ನು ಯಾವ ಕಾಲಮಿತಿಯಲ್ಲಿ ಬಗೆಹರಿಸಲಾಗುವುದು?</td><td>ವೇತನ ನೀಡುವ ಸಮಸ್ಯೆಯನ್ನು ಈಗಾಗಲೇ ಪರಿಹರಿಸಲಾಗಿದ್ದು, ಸದರಿ ಶಾಲೆಗಳ ಪಿಂಚಣಿ ನೀಡುವ ಬಗ್ಗೆ ಪರಿಶೀಲನಾ ಹಂತದಲ್ಲಿರುತ್ತದೆ.</td></tr>
</table>

ಸಂಖ್ಯೆ: ಮಮಇ 195 ಪಿಹೆಚ್‌ಪಿ 2021

Halappa B A

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂವಿಜ್ಞಾನ ಹಾಗೂ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ
ಇಲಾಖೆ ಸಚಿವರು